ಶ್ರೀ ಕೆ. ಬಿ. ಮಲ್ಲಪ್ಪ.—ಅರಣ್ಯ ಇಲಾಖೆಯವರು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಲ್ಲಿ ಗಿಡಗಳನ್ನು ಹಾಕಿ ಬೆಳೆಸುವ ಬದಲು ಮಲೆನಾಡು ಪ್ರದೇಶದಲ್ಲಿ ಸಣ್ಣಪುಟ್ಟ ಗುಡ್ಡಗಾಡು ಪ್ರದೇಶಗಳಲ್ಲಿ ಇರತಕ್ಕ ಜಮೀನಿನಲ್ಲಿ ಏತಕ್ಕೆ ಬೆಳೆಸಬಾರದು ಎಂಬುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.—ಪ್ರಸ್ತುತ ಪ್ರಶ್ನೆಗೆ ಇದು ಬರುವುದಿಲ್ಲ. ಯಾವ ಅರಣ್ಯದಲ್ಲಿ ಗಿಡಗಳನ್ನು ಬೆಳೆಸಬೇಕೆಂಬ ಮಾಹಿತಿ ನನ್ನ ಬಳಿ ಇದ್ದರೂ, ನಾನೂ ಅದಕ್ಕೆ ಉತ್ತರ ಕೊಡುವ ಗೋಜಿಗೆ ಹೋಗುವುದಿಲ್ಲ. ಅನಧಿಕೃತ ಸಾಗುವಳಿ ಬಗ್ಗೆ ೧೯೭೯ನೇ ಸಾಲಿನಲ್ಲಿ ಕಾನೂನು ಮಾಡಲಾಗಿದೆ. ಜಮೀನು ಒತ್ತುವರಿಗಳಲ್ಲಿ ಎರಡು ವಿಧವಾದ ಒತ್ತುವರಿಗಳಿವೆ. ಒಂದನೆಯದು, ಒಂದು ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡು, ಮನೆಯ ಸುತ್ತಲೂ ಇರುವ ಜಾಗವನ್ನು ಒತ್ತುವರಿ ಮಾಡಿಕೊಳ್ಳುವುದು; ಎರಡನೆಯದು ಸ್ವಂತ ಜಮೀನಿನ ಹಕ್ಕದಲ್ಲಿರುವ ಅರಣ್ಯ ಅಥವಾ ಕಂದಾಯ ಜಮೀನುಗಳನ್ನು ಒತ್ತುವರಿ ಮಾಡಿಕೊಳ್ಳುವುದು. ಇದು ಮಲೆನಾಡು ಪ್ರದೇಶಗಳಲ್ಲಿ ಬಹಳ ವ್ಯಾಪಕವಾಗಿದೆ. ಕೆಲವು ಶಕ್ತಿವಂತರು ಅಧಿಕಾರಿಗಳನ್ನು ಹೆದರಿಸಿ ಅಥವಾ ಒಳಕ್ಕೆ ಹಾಕಿಕೊಂಡು ಅಥವಾ ಆಡಬಾರದ ಆಟಗಳನ್ನೆಲ್ಲ ಆಡಿ, ತಮ್ಮ ಜಮೀನಿನ ಸುತ್ತಲೂ ಇರುವ ಸರ್ಕಾರದ ಅರಣ್ಯ ಅಥವಾ ಕಂದಾಯ ಜಮೀನಿಗೆ ಬೇಲಿ ಹಾಕಿಸಿ ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದನ್ನೂ ನಾವು ನೋಡಿದ್ದೇವೆ. ಯಾರೋ ಒಬ್ಬ ಬಡವ ಗುಡಿಸಲನ್ನು ಕಟ್ಟಿಕೊಂಡು ಸ್ವಲ್ಪ ಭಾಗ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೆ, ಅದನ್ನು ಅವನಿಗೇ ಬಿಡಲು ನೋಡಬಹುದೇನೋ. ಆದರೆ, ಒತ್ತುವರಿ ಮಾಡಿಕೊಂಡಿರುವವರೆಲ್ಲರಿಗೂ ಅಂದರೆ ಶ್ರೀಮಂತರಿಗೂ ಬಿಟ್ಟುಕೊಡುವುದಾದರೆ ಬಡವರಿಗೆ ನಾವು ಸ್ವಲ್ಪ ಜಮೀನನ್ನೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ದೊಡ್ಡ ಜಮೀನ್ದಾರರುಗಳಿಗೆ ಕೊಡಿ ಎಂದು ನಾನು ಹೇಳುತ್ತಿಲ್ಲ, ಜೀವನೋಪಾಯಕ್ಕಾಗಿ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡುತ್ತಿರುವವರಿಗೆ ಕೊಡಿ ಎಂದು ನಾನು ಹೇಳುತ್ತಿರುವುದು.

ಶ್ರೀ ಎಸ್. ಬಂಗಾರಪ್ಪ.—ನಾನು ಸರ್ಕಾರದ ನೀತಿಯನ್ನು ಕುರಿತು ಹೇಳಿದ್ದೇನೆ. ತಾವು ಕೇಳುತ್ತಿರುವ ಪ್ರಶ್ನೆ ಅರಣ್ಯ ಜಮೀನಿನ ಒತ್ತುವರಿ ಕುರಿತದ್ದಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ, ನಾನು ಉತ್ತರ ಕೊಡುತ್ತೇನೆ. ಮಾನ್ಯ ಸದಸ್ಯರು ಬಡವರ ಬಗ್ಗೆ ಹೇಳಿರುವುದನ್ನು ನಾನು ಅನುಮೋದಿಸುತ್ತೇನೆ. ಅದರ ಬಗ್ಗೆ ಕಾನೂನು ಕೂಡ ಇದೆ. ಅವರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯ ಶ್ರೀ ಎಚ್. ಗಂಗಾಧರನ್ ಅವರ ೨೭ (೦೮೨)ನೇ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಆದುದರಿಂದ, ಮಾನ್ಯ ಸದಸ್ಯರು ತಮ್ಮದೇ ಆದ ಮತ್ತೊಂದು ಪ್ರಶ್ನೆಯನ್ನು ಕೇಳಬಹುದು.

Complaints about working of Land Tribunals is Mysore District

186 SRI H. GANGADHARAN (Krishnaraja)—Will the Minister for Revenue and Agriculture be pleased to state:—

(a) whether any Complaints about corruption, nepotism and favouritism in the working of Land Tribunals in Mysore District were received by Government:

(b) whether the change of Tribunals constituted by the previ us Government was done due to these complaints ?

SRI S. BANGARAPPA (Minister for Revenue and Agriculture,—)

(a) No specific complaints have come to the notice of Government

(b) Does not arise in view of reply to clause (a) above.

ಶ್ರೀ ಪೆಚ್, ಗಂಗಾಧರಪ್ಪ.— ಯಾವುದೇ ನಿರ್ದಿಷ್ಟ ದೂರುಗಳು ಸರ್ಕಾರದ ಗಮನಕ್ಕೆ ಬಾರದೆ ಇರುವಾಗ ಭೂ ನ್ಯಾಯ ಮಂಡಲಿಗಳನ್ನು ರದ್ದು ಮಾಡಲಿಕೆ ಇದ್ದ ಕಾರಣಗಳೇನು? ರಾಜ್ಯದ ಭೂ ನ್ಯಾಯ ಮಂಡಲಿಗಳು ಈ ಸಭೆ ಅನುಮೋದಿಸಿರುವ ಶಾಸನಕ್ಕನುಸಾರವಾಗಿ ಕೆಲಸ ಮಾಡಬೇಕಾಗಿದೆಯೇ ಅಥವಾ ವ್ಯಕ್ತಿಗಳು ಅಥವಾ ಪಕ್ಷಗಳು ಬದಲಾವಣೆಯಾದರೆ ಆ ಬದಲಾವಣೆಗಳಿಗನುಸಾರವಾಗಿ ಕೆಲಸ ಮಾಡಬೇಕಾಗಿದೆಯೇ? ಮೂಲತ: ಸರ್ಕಾರದ ಬದಲಾವಣೆಯಾದಾಗ ಭೂ ನ್ಯಾಯ ಮಂಡಲಿಗಳನ್ನೂ ರದ್ದು ಮಾಡಲಿಕ್ಕೆ ಈ ಸರ್ಕಾರಕ್ಕೆ ಇದ್ದ ನಿರ್ದಿಷ್ಟ ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸದಸ್ಯರು ಹೇಳಿದಂತೆ ಭೂ ನ್ಯಾಯ ಮಂಡಲಿಗಳ ಕಾರ್ಯದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಸ್ವಪಕ್ಷಪಾತಗಳ ದೂರುಗಳ ಜೊತೆಗೆ ಇನ್ನೂ ಬೇರೆ ರೀತಿಯ ದೂರುಗಳು ಬರುವುದಕ್ಕೆ ಸಾಧ್ಯವಿದೆ. ನನಗೆ ಬಂದಿರುವ ವರದಿ ಪ್ರಕಾರ ಆ ರೀತಿ ದೂರುಗಳು ಬಂದಿಲ್ಲ ವೆಂದು ಗೊತ್ತಾಗುತ್ತಿದ್ದರೂ ಕೂಡ ಅಂತಹ ದೂರುಗಳು ಬರುವುದಕ್ಕೆ ಸಾಧ್ಯತೆ ಇದೆ. ಹಿಂದೆಲ್ಲಾ ಈ ಸದನದಲ್ಲಿ ಚರ್ಚೆ ನಡೆದಾಗ, ಅನೇಕ ಮಾನ್ಯ ಸದಸ್ಯರು, ಅನೇಕ ಭೂ ನ್ಯಾಯ ಮಂಡಲಿಗಳ ಸದಸ್ಯರನ್ನು ಬದಲಾವಣೆ ಮಾಡಿ, ಆಲ್ಲಿಗೆ ಬೇರೆಯವರನ್ನು ಹಾಕಿ ಎಂದು ಸಲಹೆ ಮಾಡುತ್ತಿದ್ದುದುಂಟು; ಆದರೆ, ಆ ದೃಷ್ಟಿಯಿಂದ ಎಲ್ಲರನ್ನೂ ಕಿತ್ತುಹಾಕಬೇಕೆನ್ನುವುದು ಸರ್ಕಾರದ ಉದ್ದೇಶವಲ್ಲ. ಒಳ್ಳೆಯ ವರನ್ನು ನ್ಯಾಯ ಮಂಡಲಿಗಳಲ್ಲಿ ಸದಸ್ಯರನ್ನಾಗಿ ಇಡೋಣ. ಅನೇಕ ಮಾನ್ಯ ಸದಸ್ಯರು, ಭೂ ನ್ಯಾಯ ಮಂಡಲಿಗಳ ಸದಸ್ಯರು ಮಾಡುತ್ತಿರುವ ಅವ್ಯವಹಾರಗಳನ್ನು ದಾಖಲೆ ಸಮೇತ ಗಮನಕ್ಕೆ ತಂದಾಗ ಅಂತಹವರನ್ನು ತೆಗೆದು ಹಾಕದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ಸದ್ಯಕ್ಕೆ ಜನರಲ್ ಆಗಿ ಭೂ ನ್ಯಾಯ ಮಂಡಲಿಗಳನ್ನು ರದ್ದು ಮಾಡಲಾಗಿದೆಯೇ ಹೊರತು, ಅದಕ್ಕೆ ಬೇರೆ ಯಾವ ಉದ್ದೇಶವೂ ಇಲ್ಲ.

ಶ್ರೀ ಪೆಚ್. ಗಂಗಾಧರಪ್ಪ.—ಮತ್ತೆ ಯಾವಾಗ ಭೂ ನ್ಯಾಯ ಮಂಡಲಿಗಳನ್ನು ರಚನೆ ಮಾಡ ಲಾಗುವುದು? ಹಾಗೆ ಮಾಡುವಾಗ ಸದಸ್ಯರನ್ನು ಪಕ್ಷಾತೀತ ದೃಷ್ಟಿಯಿಂದ ನಾಮಕರಣ ಮಾಡಲಾಗು ವುದೆ ಅಥವಾ ಕೇವಲ ಒಬ್ಬ ವ್ಯಕ್ತಿಗೆ ಅಥವಾ ಒಂದು ಪಕ್ಷಕ್ಕೆ ಬೆಂಬಲ ಕೊಟ್ಟವರನ್ನು ಮಾತ್ರ ನಾಮ ಕರಣ ಮಾಡಲಾಗುವುದೆ? ಮತ್ತು ಕಾನೂನು ಬಲ್ಲ ವ್ಯಕ್ತಿಗಳಿಗೆ ಇದರಲ್ಲಿ ಅವಕಾಶ ಕೊಡಲಾಗುವುದೆ?

ಶ್ರೀ ಎಸ್. ಬಂಗಾರಪ್ಪ.— ಈ ವಿಚಾರ ಅನೇಕ ಬಾರಿ ಈ ಸದನದಲ್ಲಿ ಚರ್ಚೆಗೆ ಬಂದಿರುವುದು ನಮಗೆಲ್ಲಾ ತಿಳಿದಿದೆ. ಭೂ ನ್ಯಾಯ ಮಂಡಲಿಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ವಿಚಾರ ಒಂದು ಪಕ್ಷಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಒಬ್ಬ ವ್ಯಕ್ತಿಗೆ ಅಥವಾ ಒಂದು ಸಂಸ್ಥೆಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಇದು ಸಾರ್ವಜನಿಕರಿಗೆ ಸಂಬಂಧಿಸಿದ ವಿಷಯ. ಇದನ್ನು ಪಕ್ಷಾತೀತವಾಗಿ ನೋಡಬೇಕೆನ್ನುವುದು ಸರ್ಕಾರದ ನೀತಿಯಾಗಿದೆ. ವಿರೋಧ ಪಕ್ಷದವರನ್ನೂ ನಂಬಿಕೆಗೆ ತೆಗೆದುಕೊಂಡು ಅವರು ಸೂಚಿಸಿದ ಕೆಲವು ಸದಸ್ಯರನ್ನು ಭೂ ನ್ಯಾಯ ಮಂಡಲಿಗಳಿಗೆ ಸದಸ್ಯರನ್ನಾಗಿ ಇಂದೆ ಮಾಡಿದ್ದು ನಮ್ಮ ಗಮನದಲ್ಲಿದೆ. ವಿರೋಧ ಪಕ್ಷದವರನ್ನು ಬಿಟ್ಟು ಮಾಡುವ ಕೆಲಸವಲ್ಲ ಇದು. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳೂ ಸಹ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಒಳ್ಳೆಯವರೆಂದು ಕಂಡು ಬಂದವರನ್ನು ಮಾತ್ರ ನ್ಯಾಯ ಮಂಡಲಿಗಳಲ್ಲಿ ಸದಸ್ಯರನ್ನಾಗಿ ಮಾಡಬೇಕೆಂದು ನಾವು ಹೊಣೆಸಿದ್ದೇವೆ. ಕೆಟ್ಟವರು ಎಂದು ಕಂಡುಬಂದವರನ್ನು—ಅವರು ಯಾವ ಪಕ್ಷದವರೇ ಇರಲಿ ಎಷ್ಟು ದೂರ ಇಟ್ಟರೂ ಅಷ್ಟೂ ಒಳ್ಳೆಯದೇ, ಒಬ್ಬ ಬಡವನ ನ್ಯಾಯವಾದ ಅರ್ಜಿ ವಜಾ ಆದರೆ ಆವನ ಇಡೀ ಕುಟುಂಬವೇ ಹಾಳಾಗುತ್ತದೆ: ಅದು ಹಾಗೇ ಮುಂದುವರಿದರೆ ಕೆಲವಾರು ಕುಟುಂಬಗಳೇ ನಿರ್ನಾಮವಾಗುತ್ತವೆ ಇದನ್ನು ನಾನು ಬಹಳ ಸೂಕ್ಷ್ಮವಿಂದ ಹೇಳುತ್ತಿದ್ದೇನೆ. ಇದರ ಗಂಭೀರತೆಯನ್ನೂ ದುಃಖವನ್ನೂ ಆರಿತವರಿಗೆ ಇದರ ನೋವು ಅರ್ಥವಾಗುತ್ತದೆ. ಆವನ ಅರ್ಜಿಯನ್ನು ವಜಾ ಮಾಡಿ, ಬೇಕಾದರೆ ನ್ಯಾಯಾ ಲಯಕ್ಕೆ ಹೋಗು ಎಂದು ಹೇಳಬಹುದು. ಆದರೆ, ಅವನಿಗೆ ಆ ಶಕ್ತಿ ಇರುವುದಿಲ್ಲ. ಅವನಿಗೆ ಸರ್ಕಾರ ಲೀಗಲ್ ಏಡ್ ಕೊಟ್ಟರೂ ಜಮೀನು ಆವನ ಸ್ವಾಧೀನದಲ್ಲಿದ್ದೂ ಕಾನೂನಿನ ಪ್ರಕಾರ ಅವನಿಗೆ ಆದು ದೊರೆಯುತಕ್ಕ ಸಂದರ್ಭವಿರುವಾಗ ಪೋಸ ಆಥವಾ ಅನ್ಯಾಯದಿಂದ ದೊರೆಯುವ ಹಾಗೆ ಮಾಡುವವರಿದ್ದಾರೆ. ಅಂತವರನ್ನು—ಅವರು ಯಾವ ವರ್ಗದವರೇ ಆಗಲಿ ದೂರವಿಡಬೇಕು. ಇಲ್ಲದಿದ್ದರೆ ನಾವು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ಮಾನ್ಯ ಸದಸ್ಯರೆಲ್ಲರೂ ತಮ್ಮ ಸಹಕಾರ-ಸಲಹೆಗಳನ್ನು ಕೊಟ್ಟು, ಆವಷ್ಟೂ ಒಳ್ಳೆಯವರನ್ನು ಮಂಡಲಿಯ ಸದಸ್ಯರನ್ನಾಗಿ ಮಾಡಲು ಸೂಚಿಸಿದರೆ, ಅಂತಹವರನ್ನು ಎಲ್ಲಿ ಕಡೆ ಹಾಕಬೇಕೆನ್ನುವುದೂ ಸರ್ಕಾರದ ಉದ್ದೇಶವಿದೆ.

ಶ್ರೀ ಜೆ. ಎಚ್. ಪಟೇಲ್.—ಒಳ್ಳೆಯವರು ಮತ್ತು ಕೆಟ್ಟವರು ಯಾರು ಎಂಬುದನ್ನು ನಿಷ್ಪಕ್ಷಪಾತವಾಗಿ ಆಲೋಚನೆ ಮಾಡಿ, ಒಳ್ಳೆಯವರನ್ನು ಮಾತ್ರ ಸೂಚಿಸಿದರೆ ಅವರನ್ನು ಭೂ ನ್ಯಾಯ ಮಂಡಲಿಗಳ ಸದಸ್ಯರನ್ನಾಗಿ ಮಾಡೋಣವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಹೋದ ಸಾರಿ ಭೂ ಮಂಡಲಿಗಳನ್ನು ರಚನೆ ಮಾಡುವಾಗ್ಗೆ ಆಗಿನ ಕಂದಾಯ ಮಂತ್ರಿಗಳೂ ಸಹ ಒಳ್ಳೆಯವರನ್ನೇ ಹಾಕಬೇಕೆಂದು ಯೋಚಿಸಿದ್ದೇವೆ, ಒಳ್ಳೆಯವರ ಹೆಸರನ್ನೇ ಕೊಡಿ ಎಂದು ಕೇಳಿದ್ದರು. ಆದರೆ, 'ಒಳ್ಳೆಯವರು' ಎನ್ನುವುದನ್ನು ನಾವು ಯಾವುದರ ಆಧಾರದ ಮೇಲೆ ಪತ್ತೆ ಹಚ್ಚಬೇಕೆನ್ನುವುದು ನನಗೆ ತಿಳಿಯುತ್ತಿಲ್ಲ. ಇದರ ಬಗ್ಗೆ ನಾನೊಂದು ಉದಾಹರಣೆ ಕೊಡುತ್ತೇನೆ ದಾವಣಗೆರೆ ಭೂ ನ್ಯಾಯ ಮಂಡಲಿಯಲ್ಲಿ ಇಬ್ಬರು ಸದಸ್ಯರಿದ್ದಾರೆ. ಅವರಲ್ಲೊಬ್ಬ '· ಒಳ್ಳೆಯವನು' ಮತ್ತೊಬ್ಬ 'ಕೆಟ್ಟವನು' ಒಳ್ಳೆಯವನು ರಾಜಾರೋಷವಾಗಿ ದುಡ್ಡು ತೆಗೆದುಕೊಳ್ಳುತ್ತಿದ್ದ ಮತ್ತು ನಿಯತ್ತಿನಿಂದ ಕೆಲಸ ಮಾಡಿ ಕೊಡುತ್ತಿದ್ದ ಅವನು ಬಹಳ 'ಒಳ್ಳೆಯ ಮನುಷ್ಯ' 'ಕೆಟ್ಟವನು ,ದುಡ್ಡು ತೆಗೆದುಕೊಂಡರೂ ಕೆಲಸ ಮಾಡುತ್ತಿರಲಿಲ್ಲ ಈ ರೀತಿಯ ಆಧಾರಗಳ ಮೇಲೆ ನಾವು 'ಒಳ್ಳೆಯವರು' ಮತ್ತು ಕೆಟ್ಟವರನ್ನು ಗುರುತಿಸಬೇಕೆ? ಅಥವಾ ಕಾಂಗ್ರೆಸ್ (ಐ) ಪಕ್ಷದಲ್ಲಿರುವವರೆಲ್ಲ '·ಒಳ್ಳೆಯವರು ವಿರೋಧ ಪಕ್ಷದವರೆಲ್ಲ ಕೆಟ್ಟವರು ಎಂದು ಭಾವಿಸೋಣವೆ? ಒಳ್ಳೆಯವರು ಮತ್ತು ಕೆಟ್ಟವರು ಯಾರು ಎಂಬುದನ್ನು ಪತ್ತೆ ಮಾಡಲಿಕ್ಕೆ ಇರುವ ಮಾನದಂಡವೇನು? ಪ್ರತಿಯೊಂದು ಭೂನ್ಯಾಯ ಮಂಡಲಿಗೂ ಸದಸ್ಯರನ್ನು ನಾಮಕರಣ ಮಾಡುವಾಗ, ಆ ಕ್ಷೇತ್ರದ ಶಾಸಕನು ಅವರು ಯಾವ ಪಕ್ಷಕ್ಕೇ ಸೇರಿರಲಿ ಸಲಹೆ ಪಡೆದು ನೇಮಿಸುವುದರಲ್ಲಿ ನ್ಯಾಯವಿದೆ. ಆತ ಕೊಟ್ಟ ಸಲಹೆಯನ್ನು ಒಪ್ಪುವುದು ಮತ್ತು ಬಿಡುವುದು ಸರ್ಕಾರಕ್ಕೆ ಸೇರಿದ್ದು. ಆದರೆ, ಸಲಹೆ ಕೇಳುವುದು ಮಾತ್ರ ಬಹಳ ಅವಶ್ಯ. ವಿರೋಧ ಪಕ್ಷಗಳಿಗೆ ಸೂಕ್ತ ಪ್ರಾತಿನಿಧ್ಯವನ್ನು ನ್ಯಾಯ ಮಂಡಲಿಗಳನ್ನು ರಚನೆ ಮಾಡುವಾಗ ಕೊಡಲಾಗುವುದೆಂದು ಹಿಂದಿನ ಕಂದಾಯ ಸಚಿವರು ತಿಳಿಸಿದ್ದರು. ಆದೇ ಸತ್‌ಸಂಪ್ರದಾಯವನ್ನು ಇಂದಿನ ಸರ್ಕಾರವೂ ಪಾಲಿಸಬೇಕು. ಹಿಂದಿನ ಕಂದಾಯ ಸಚಿವರು ನಮ್ಮಿಂದ ಹೆಸರುಗಳನ್ನು ಪಡೆದಿದ್ದರು ಮತ್ತು ಅವುಗಳನ್ನು ಒಪ್ಪಿ ಇದ್ದರು. ಆದರೆ, ಅಂದಿನ ಮುಖ್ಯ ಮಂತ್ರಿಗಳು ಅವುಗಳಲ್ಲಿ ಬಹುಭಾಗ ಹೆಸರುಗಳನ್ನು ತೆಗೆದು ಹಾಕಿದರು. ಇದಕ್ಕೆ ಏನು ಕಾರಣವೋ ನನಗೆ ಗೊತ್ತಿಲ್ಲ. ಮಾನ್ಯ ಬಂಗಾರಪ್ಪನವರಿಗೂ ಮತ್ತು ಮಾನ್ಯ ಗುಂಡುರಾಯರಿಗೂ ಚೆನ್ನಾಗಿಲ್ಲವೆಂದು ಜನ ಹೇಳುತ್ತಿದ್ದಾರೆ. ಅಂತಹದರಲ್ಲಿ ನಾವು ಮಾನ್ಯ ಬಂಗಾರಪ್ಪನವರಿಗೆ ಹೆಸರುಗಳನ್ನು ಕೊಡುವುದು ಮತ್ತೆ ಅದನ್ನು ಮಾನ್ಯ ಗುಂಡೂರಾಯರು ಹೊಡೆದು ಹಾಕಿದರೆ ಏನು ಪ್ರಯೋಜನ? ನಾವು ಹೆಸರು ಕೊಟ್ಟವರನ್ನು ನಾಮಕರಣ ಮಾಡಿಯೇ ಮಾಡುತ್ತೇನೆ ಎಂದು ಮಾನ್ಯ ಬಂಗಾರಪ್ಪನವರು ಧೈರ್ಯವಾಗಿ ಹೇಳುವುದಾದರೆ ನಾವು ಹೆಸರುಗಳನ್ನು ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಕೆಲವೊಮ್ಮೆ ಸ್ನೇಹಿತರೂ ದೂರವಾಗುವುದೂ ಉಂಟು; ಕೆಲವೊಮ್ಮೆ ಹತ್ತಿರವಾಗುವುದುಂಟು. ಹಿಂದಿನ ಮುಖ್ಯ ಮುಖ್ಯಮಂತ್ರಿಗಳು ಯಾವರೀತಿ ಮಾಡಿದರು, ಏತಕ್ಕೆ ಹೀಗೆ ಮಾಡಿದರು ಎನ್ನುವ ಬಗ್ಗೆ ಮಾನ್ಯ ಜೆ. ಹೆಚ್. ಪಟೇಲರವರು ತಿಳಿದುಕೊಳ್ಳುವುದು ಒಳ್ಳೆಯದು; ಈಗ ಹೇಗಿದ್ದರೂ ಅಲ್ಲಿಯೇ ಇದ್ದಾರೆ. ಅವರ ಸಮಾಧಾನಕ್ಕಾದರೂ ತಿಳಿದುಕೊಳ್ಳಲಿ ಅವರು ಒಳ್ಳೆಯವರು ಎಂದು ಹೇಗೆ ಕಂಡುಹಿಡಿಯುವುದು ಅಂತ ಒಬ್ಬನು ಹಣ ತೆಗೆದು ಕೊಂಡು ಕೆಲಸ ಮಾಡಿಕೊಡುತ್ತಾನೆ; ಮತ್ತೊಬ್ಬ ಹಣ ತೆಗೆದುಕೊಂಡು ಕೆಲಸ ಮಾಡುತ್ತಾ ಇಲ್ಲ, ಇವನು ಕೆಟ್ಟವನು ಅಂತ ಹೇಳಿದರು. ಅವರು ಎರಡು ಮಾತ್ರ ಹೇಳಿದ್ದಾರೆ; ಆದರಲ್ಲಿ ಇನ್ನೂ ನಮ್ಮೂನೆಯ ಜನ ಇದ್ದಾರೆ. ಈಗ ಪ್ರಶ್ನೋತ್ತರ ವೇಳೆಯಾದುದರಿಂದ ವಿವರ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಪ್ರಶ್ನೆ ಇರತಕ್ಕಂಥ ಒಳ್ಳೆಯವರನ್ನು ಹೇಗೆ ಪತ್ತೆ ಹಚ್ಚತಕ್ಕಂಥಾದ್ದು ; ಇದು ಎಲ್ಲರನ್ನೂ ಕಾಡತಕ್ಕ ಪ್ರಶ್ನೆ. ವ್ಯಕ್ತಿಗಳ ಹೆಸರುಗಳನ್ನು ಶಾಸಕರುಗಳು ಕೊಡಲಿ, ಸಾರ್ವಜನಿಕರು ಕೊಡಲಿ, ಕೊನೆಗೆ ಮಂತ್ರಿಗಳೇ ಹಾಕಿರಲಿ ನಾಳೆ ಹೆಚ್ಚು ಕಡಿಮೆ ಆದರೆ ತೊಂದರೆಯಾಗುತ್ತದಲ್ಲ; ಅದಕ್ಕೆ ನಾನು ಉತ್ತರ ಕೊಡುತ್ತಾ ಹೇಳಿದೆ, ಒಳ್ಳೆಯವರು ಇರಬೇಕೆಂದರೆ ೯೯ ಪರ್ಸೆಂಟ್ ಒಳ್ಳೆಯ ವ್ಯಕ್ತಿ ಎಂದು ಕಂಡು ಬಂದರೆ; ಅಂಥವರಿಂದ ೯೫ ರಷ್ಟು ಜನಕ್ಕೆ ಒಳ್ಳೆಯ ಉಪಯೋಗವಾಗುತ್ತದೆ. ಅದಕ್ಕೆ ನಾನು ತಮ್ಮಮೂಲಕ ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ಹೊಸ ಹೊಸ ವಿಚಾರಧಾರೆ ಇದ್ದರೆ ದಯವಿಟ್ಟು ಸಲಹೆ ಕೊಡಿಯೆಂದು. ಮತ್ತೊಂದು ಕಾನೂನು ಪ್ರಕಾರ ಬಹಳ ಒಳ್ಳೆಯವನೆಂದು ಹಾಕಿಬಿಡುತ್ತೇವೆ. ಅವನು ದುಡ್ಡು ತಿನ್ನುವುದಕ್ಕೆ ಪ್ರಯತ್ನಮಾಡುತ್ತಾನೆ. ಸ್ವಜನ ಪಕ್ಷಪಾತ, ಸ್ವಪಕ್ಷಪಾತ

ಎಲ್ಲವನ್ನೂ ಮಾಡುತ್ತಾನೆ. ಆಷ್ಟರೊಳಗೆ ನಾಲ್ಕು ಜಡ್ಜಮೆಂಟ್ ಕೂಡ ಬರೆಯುತ್ತಾನೆ; ನಾವು ಕಾನೂನು ಪ್ರಕಾರ ವಜಾ ಮಾಡುತ್ತೇವೆ. ಆದರೂ ಅತನು ಬರೆದಂಥ ಜಡ್ಜಮೆಂಟಿನಿಂದ ನಾಲ್ಕು ಕುಟುಂಬಗಳು ಹಾಳಾಗಿ ಹೋಗುತ್ತವೆ. ಆದ್ದರಿಂದ ಮಾನ್ಯ ಸದಸ್ಯರುಗಳು ಈ ವಿಚಾರವನ್ನು ಗಂಭೀರವಾಗಿ ಯೋಚನೆ ಮಾಡಿ ಒಂದು ತಾರದೊಳಗೆ ತಮ್ಮ ತಮ್ಮ ಸಲಹೆಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಕಂದಾಯ ಮಂತ್ರಿಗಳಿಗೆ ಈ ವಿಷಯದಲ್ಲಿ ಬಹಳ ಕಾಳಜಿ ಇದೆ ಎಂಬುದನ್ನು ನಿನ್ನೆಯಿಂದ ಅವರು ಆಡುತ್ತಿರುವ ಮಾತುಗಳಿಂದ ಅರ್ಥಮಾಡಿಕೊಂಡಿದ್ದೇನೆ. ಅವರು ಅರಸು ಹೋದ ಮಾರ್ಗ ಹೇಗೆ ಎಂದು ಹೇಳಿದರು. ಮುಂದೆ ನಡೆದಂತ ಘಟನೆಗಳು ಮುಂದೆ ನಿಮಗೆ ದಾರಿದೀಪವಾಗುತ್ತವೆ. ಅವರ ಪಕ್ಷದ ಜಿಲ್ಲಾಧ್ಯಕ್ಷರುಗಳು ಶಾಸಕರುಗಳು, ಪಾರ್ಲಿಮೆಂಟ್ ಸದಸ್ಯರುಗಳು ಹೇಳಿದವರನ್ನೇ ಆ ಸಮಿತಿಗಳಲ್ಲಿ ಹಾಕಿದ್ದರ ಫಲ, ಅವರು ಅಧಿಕಾರದಲ್ಲಿ ಇರಲಿಕ್ಕೆ ಆಗಲಿಲ್ಲ. ಆದುದರಿಂದ ತಾವುಗಳು ಆ ಮಾರ್ಗ ಬಿಟ್ಟು, ೧೯ ಜನ ಜಿಲ್ಲಾಧಿಕಾರಿಗಳು ಇದ್ದಾರೆ. ಬಹುತೇಕ ಯಾವ ಜಿಲ್ಲಾಧಿಕಾರಿಯೂ ಭ್ರಷ್ಟ ಅಧಿಕಾರಿ ಅಂತ ನನ್ನ ಗಮನಕ್ಕೆ ಬಂದಿಲ್ಲ. ತರುಣರು ಇದ್ದಾರೆ, ಯೋಗ್ಯರು ಇದ್ದಾರೆ, ಯೋಗ್ಯರಾದವರ ಪಟ್ಟಿಯನ್ನು ತಾವು ಕೇಳಿದರೆ ಕಳುಹಿಸಿಕೊಡುತ್ತಾರೆ. ತಾವು ಜಿಲ್ಲಾಧಿಕಾರಿಗಳಿಂದ ಬಂದಂಥ ಪಟ್ಟಿಯನ್ನು ಮಾನ್ಯತೆ ಮಾಡಿದರೆ ಸಾಕು. ಈ ಪಿಡುಗಿನಿಂದ ದೂರ ಇರಬಹುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಒಂದು ಭಾಗ ಕುರಿತು ಮಾತ್ರ ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಕೂಡ ವ್ಯಕ್ತಿಗಳ ಪ್ರಾಮಾಣಿಕತೆಯನ್ನು ಪತ್ತೆ ಹಚ್ಚುವುದು ಕಷ್ಟವಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮ ಸೆಲೆಕ್ಷನ್ನಿಗಿಂತ ಅವರ ಸೆಲೆಕ್ಷನ್ ಅತಿ ಮುಖ್ಯವಾದುದು.

ಶ್ರೀ ಎಸ್. ಬಂಗಾರಪ್ಪ — ಪ್ರಾಮಾಣಿಕತೆಯನ್ನು ಪತ್ತೆ ಹಚ್ಚುವುದು ಕಷ್ಟವಿದೆ. ಜಿಲ್ಲಾಧಿಕಾರಿಗಳು ಸ್ವತಃ ಹೋಗಿ ತಿಳಿದುಕೊಳ್ಳುವುದಿಲ್ಲ. ಅಸಿಸ್ಟೆಂಟ್ ಕಮೀಷನರ್ ಅವರನ್ನು ತಹಶೀಲ್ದಾರ್ ಅವರನ್ನು ಕೇಳಿ ಅವರ ಮೂಲಕ ಹೆಸರುಗಳನ್ನು ಕಳುಹಿಸಿಕೊಡುತ್ತಾರೆ. ಇದನ್ನು ಮಾನ್ಯ ಸದಸ್ಯರು ವಿಚಾರ ಮಾಡಬೇಕು ಯಾವ ಪಟ್ಟಿಕೊಟ್ಟರೂ ವ್ಯತ್ಯಾಸವಾಗುತ್ತದೆ. ಸಮಿತಿಗಳಲ್ಲಿರುವ ಸದಸ್ಯರುಗಳನ್ನು ಕಡ್ಡಾಯವಾಗಿ ಬಿಗಿ ಮಾಡುವಂತಿರಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಅದು ಬಹಳ ಮಹತ್ವದ ಪ್ರಶ್ನೆಯಾದುದರಿಂದ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ವಿಷಯವನ್ನು ಹಲವು ಸಾರಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ ಧರಣಿ ಕೂಡ ಮಾಡಿದ್ದೇವೆ ಪ್ರತಿಯೊಂದು ಭೂ ನ್ಯಾಯ ಮಂಡಲಿಯಲ್ಲಿಯೂ ವಿರೋಧಪಕ್ಷದವರೊಬ್ಬರು ಇರಬೇಕೆಂದು ಹಿಂದಿನ ಸರ್ಕಾರ ಒಪ್ಪಿಕೊಂಡು, ನಾನು ಅಂದಿನ ಕಂದಾಯಸಚಿವರ ಜೊತೆಯಲ್ಲಿ ೨೦ ಸಭೆಗಳಿಗೆ ಹೋಗಿದ್ದೇನೆ. ಸಭೆ ಕೇರಿರತಕ್ಕ ಸಮಯದಲ್ಲಿ ಆಯಾಯಾ ಜಿಲ್ಲೆಯ ಶಾಸಕರನ್ನೂ ಕೂಡ ಕರೆದ ಪಟ್ಟಿಯನ್ನು ತಯಾರು ಮಾಡಿದರು ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಭೂ ನ್ಯಾಯಮಂಡಲಿಯ ಸದಸ್ಯರ ಪಟ್ಟಿಯನ್ನು ಸಿದ್ಧವಾಗುವಾಗ ಬಂಗಾರಪ್ಪನವರು ಬಂದಿದ್ದರು; ಪಟೇಲರು ಇದ್ದರು; ಶ್ರೀನಿವಾಸ ಅವರು ಇದ್ದು ಒಮ್ಮತದ ಮೇಲೆ ಹೆಸರುಗಳನ್ನು ಸೇರಿಸಿ ಪಟ್ಟಿಯನ್ನು ಸಿದ್ಧಮಾಡಿದರು. ಆದರೆ, ಕೊನೆಗೆ ಬಹಳಷ್ಟು ಹೆಸರುಗಳನ್ನು ಹೊಡೆಸಿಹಾಕಿದರು. ನಾನು ಈಗಾಗಲೇ ಈ ವಿಚಾರದಲ್ಲಿ ತಮಗೆ ಪತ್ರ ಬರೆದಿದ್ದೇನೆ; ಅದು ತಮ್ಮ ಕೈಸೇರಿದೆಯೋ ಇಲ್ಲವೋ ಗೊತ್ತಿಲ್ಲ. ತಾವು ಹೆಸರುಗಳನ್ನು ನಾಯಕರ ಮುಖಾಂತರ ಪಡೆಯುತ್ತೀರೋ ಯಾವುದರಿಂದ ಪಡೆಯುತ್ತಿರೋ ನಮಗೆ ಗೊತ್ತಿಲ್ಲ. ಶಾಸಕರಾದವರು ಕೂಡ ತಮ್ಮ ಜವಾಬ್ದಾರಿಯನ್ನು ಅಂತಹ ಆಯಕಟ್ಟಿನಮಟ್ಟಿಗೆ ಒಳ್ಳೆಯವರನ್ನು ಭೂ ಸುಧಾರಣೆಯಲ್ಲಿ ನಂಬಿಕೆಯಿರತಕ್ಕವರನ್ನು, ಕಾಲಾನ್ವಯ ಚಿಂತನೆಯಿರತಕ್ಕವರನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹೆಸರುಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ, ಅವರ ಬಗ್ಗೆ ಮಾಹಿತಿ ಪಡೆಯಬೇಕು. ಕಮೀಷನರ್ ಅವರೂ ಬಂದಿದ್ದಾರೆ, ಸೊಸೈಟಿಗಳನ್ನೇ ನುಂಗಿ ದಂತಪರರು ಬಂದಿದ್ದಾರೆ. ಜಿಲ್ಲಾಧಿಕಾರಿಗಳ ಆಫೀಸಾಯದನ್ನು ತೆಗೆದುಕೊಂಡು ಮಾಡಕ್ಕಕ್ಕದು ಸೂಕ್ತ. ಪ್ರತಿಯೊಂದು ಭೂ ನ್ಯಾಯಮಂಡಲಿಯಲ್ಲಿಯೂ ಒಬ್ಬರು ವಿರೋಧಪಕ್ಷದ ಸದಸ್ಯರಿರತಕ್ಕದ್ದು ಸಂಪ್ರದಾಯ, ಇದನ್ನು ಹಿಂದಿನ ಸರ್ಕಾರ ಒಪ್ಪಿಕೊಂಡಿತ್ತು; ಅದನ್ನು ಜರಿಪಾಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಏನಾಗಿದೆ ಅಂದರೆ, ಎಷ್ಟೋ ಜನ ಟೆನೆಂಟ್ಸ್‌ಗಳ ಅಪ್ಲಿಕೇಷನ್ಸ್ ಮಿಸ್‌ಮಿಸ್ ಆಗಿವೆ. ನಾನೇ

ಕೌನ್ಸಿಲ್‌ನಲ್ಲಿ ಒಂದು ಸಾರಿ ೭೦ ಎಕರೆ ಕೇಸಿನ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ಆಗಿನ ಕಂದಾಯ ಮಂತ್ರಿಗಳಾದ ಹುಚ್ಚ ಮಾಸ್ತಿ ಗೌಡರು ರಿಟ್ ಹಾಕಿಸಿದರೂ ಸರ್ಕಾರಿ ವಕೀಲರು ಸರಿಯಾಗಿ ಕೋರ್ಟಿಗೆ ಹಾಜರಾಗದೆ ಡಿಸ್‌ಮಿಸ್ ಆಗಿವೆ.

ಅಧ್ಯಕ್ಷರು.—ಇದು ಪ್ರಶ್ನೋತ್ತರ ವೇಳೆ ಪೂರ್ತಿ ವಿವರ ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಷ್ಟೋಜನ ಟ್ರಿಬ್ಯುನಲ್ ಮೆಂಬರ್ಸ್‌ಗಳ ಮೇಲೆ ದುಡ್ಡು ಮಾಡಿಕೊಂಡು ಹೋಗಿರುವ ಬಗ್ಗೆ ದೂರುಗಳಿವೆ. ಎಷ್ಟೋ ಜನ ರೈತರ ಅಪ್ಲಿಕೇಷನ್ ಡಿಸ್‌ಮಿಸ್ ಆಗಿವೆ. ಆದುದರಿಂದ ಇದರ ಬಗ್ಗೆ ಮತ್ತೊಂದು ಸಾರಿ ಚರ್ಚೆಯಾದರೆ ಅನುಕೂಲ. ಶಾಸಕರ ಸಲಹೆ ಮತ್ತು ಅಧಿಕಾರಿಗಳ ಅಭಿಪ್ರಾಯ ಎಲ್ಲವನ್ನು ತೆಗೆದುಕೊಂಡು ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಇದು ಚರ್ಚೆ ಮಾಡತಕ್ಕಂತಹ ವಿಷಯ ಹೌದು. ಈಗ ಪ್ರಶ್ನೋತ್ತರ ವೇಳೆಯಲ್ಲಿ ಇದು ಆಗುವುದಿಲ್ಲ. ಆದುದರಿಂದ ನಾವು ಇದನ್ನು ಇಷ್ಟಕ್ಕೆ ಸೀಮಿತಗೊಳಿಸೋಣ. ಏತಕ್ಕೆ ಅಂದರೆ ಇದೇ ಬಜೆಟ್ ಅಧಿವೇಶನದಲ್ಲಿ ಇದರ ಬಗ್ಗೆ ಒಂದು ಸಮಗ್ರವಾಗಿರತಕ್ಕಂತಹ ತಿದ್ದುಪಡಿಯನ್ನು ತರಬೇಕೆಂದು ಇದ್ದೇನೆ. ಆದರಲ್ಲಿ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಸೇರಿಸಬೇಕು ಅಂತ ಆಸೆ ಇದೆ. ಇನ್ನು ರಿವಿಷನ್ ಬಗ್ಗೆ ಏನು ಹೇಳಿದ್ದೀರಿ ಅದನ್ನು ಪುನಃ ಪರಿಶೀಲನೆ ಮಾಡೋಣ. ಇನ್ನು ಸದಸ್ಯರುಗಳನ್ನು ಹಾಕತಕ್ಕ ವಿಷಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರು ಸಾಕಷ್ಟು ಚರ್ಚೆ ಮಾಡಿ ತಮ್ಮ ಸಲಹೆಗಳನ್ನು ಕೊಡಲಿ ಅನ್ನುವುದೇ ಸರ್ಕಾರದ ಆಸೆ. ಮುಂದೆ ಬರತಕ್ಕ ಸಂದರ್ಭದಲ್ಲಿ ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕೊಡಿ, ಈಗ ಸದಸ್ಯರಲ್ಲಿ ನಾವು ರಚನೆ ಮಾಡಿ ಕೆಲಸಕಾರ್ಯ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಗ್ರೂಪ್‌ಲೀಡರ್ಸ್ ಕರೆದು ಕನ್ಸಲ್ಟ್ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಎಲ್ಲರನ್ನೂ ಕರೆದು ಮಾಡಲಿಕ್ಕೆ ಆಗುವುದಿಲ್ಲ. ವಿವಿಧ ಪೊಲಿಟಿಕಲ್ ಪಾರ್ಟಿಗಳ ಲೀಡರ್ಸ್ ಏನಿದ್ದಾರೆ ಅವರನ್ನು ಮಾತ್ರ ಕರೆದು ತೀರ್ಮಾನ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತಿದ್ದೇನೆ. ಇವೊತ್ತು ಮಾನ್ಯ ಸದಸ್ಯರಾದ ಗಂಗಾಧರನ್ ಅವರ ಪ್ರಶ್ನೆಗೆ ತೋಟಗಾರಿಕೆ ಹಾಗೂ ಕಾರಾಗೃಹ ರಾಜ್ಯಮಂತ್ರಿಗಳು ಕೊಡಬೇಕಾಗಿದ್ದ ಉತ್ತರವನ್ನು ತಡೆಹಿಡಿಯಲಾಗಿದೆ ಎಂದು ಹೇಳಿದಿರಿ. ಮಾನ್ಯ ಮಂತ್ರಿಗಳಿಗೆ ಈ ದಿವಸ ಪ್ರಶ್ನೆ ಇದೆ. ನಾನು ಉತ್ತರ ಕೊಡಬೇಕಾಗಿರುವುದರಿಂದ ಆ ಸಭೆಯಲ್ಲಿ ಹಾಜರಿರಬೇಕು ಅನ್ನತಕ್ಕ ವಿಚಾರ ಅವರಿಗೆ ಗೊತ್ತಿರಲಿಲ್ಲವೆ ತಮ್ಮ ಅಪ್ಪಣೆ ತೆಗೆದುಕೊಂಡು ಹೋಗಿದ್ದಾರೆಯೇ ? ತಮ್ಮ ಅಪ್ಪಣೆ ತೆಗೆದುಕೊಂಡು ಹೋಗಿದ್ದರೆ ಯಾವ ಕಾರಣಕ್ಕಾಗಿ ಹೋಗಿದ್ದಾರೆ. ಕೆಲವು ಸಾರಿ ಸಕಾರಣಗಳು ಇರುತ್ತವೆ ಆ ಸಂದರ್ಭದಲ್ಲಿ ಹೋಗಬೇಕಾಗಿರುತ್ತದೆ. ಈಗ ಏನಾಗಿದೆ ಎಲ್ಲೂ ಒಂದು ಕಡೆ ಸಮಾರಂಭ ನಡೆಯುತ್ತದೆಂದು ಹೇಳಿ ಹೋಗಿದ್ದಾರೆ. ಇವೊತ್ತು ಖಾಸಗಿ ಕೆಲಸ ಮುಖ್ಯವೋ ಈ ಸದನದ ಕೆಲಸ ಮುಖ್ಯವೋ ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಭದ್ರವಾಗಿ ನೋಡಿಕೊಳ್ಳದೇ ಹೋದರೆ ಬಹಳ ಕಷ್ಟವಾಗುತ್ತದೆ. ಹಿಂದಿನ ಸರ್ಕಾರ ಇದ್ದಾಗಲೂ ಕೂಡ ಇದೇ ಈ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ಮುಂದುವರಿಸಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲ. ದಯವಿಟ್ಟು ಇದರ ಬಗ್ಗೆ ತೀವ್ರ ನಿಲುವನ್ನು ತಾವು ತೆಗೆದುಕೊಳ್ಳಬೇಕು. ಇವೊತ್ತು ಸಭೆ ನಡೆಯುತ್ತದೆ ಅನ್ನುವುದು ಗೊತ್ತಿದ್ದು ನನ್ನ ಪ್ರಶ್ನೆ ಬರುತ್ತದೆ. ನಾನು ಉತ್ತರ ಕೊಡಬೇಕು ಅನ್ನುವುದು ಗೊತ್ತಿದ್ದು ಯಾವುದೋ ಒಂದು ಸಮಾರಂಭಕ್ಕೆ ತಮ್ಮ ಖಾಸಗಿ ಕೆಲಸಕ್ಕೆ ಹೋಗುವುದರ ಔಚಿತ್ಯ ಏನು ? ಅವರು ಈಗ ಮಾಡಿರತಕ್ಕಂತಾದ್ದು ಈ ಸಭೆಗೆ ಅವಮಾನ ಮಾಡಿದಂತಾಗುತ್ತದೆ, ಈ ಸಭೆಗೆ ಧಿಕ್ಕಾರ ಮಾಡಿದಂತಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಮಂತ್ರಿಗಳಿಗೆ ದಿವಸ ಒಂದೊಂದು ಗದೆ ತೆಗೆದುಕೊಳ್ಳುವ ಆಸೆಯಾಗಿದೆ ಅದಕ್ಕಾಗಿ ಹೋಗುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದೇ ಗದಾಪ್ರಹಾರ ನನ್ನ ಮೇಲೆ ಬಂದರೆ ಏನು ಮಾಡಲಿ ಅದಕ್ಕೆ ಹೆದರಿಕೊಂಡಿದ್ದೇನೆ. ಅಧ್ಯಕ್ಷರೇ, ಇದರ ಬಗ್ಗೆ ತಾವು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ನಾವು ಬೇರೆ ಏನಾದರೂ ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ತಾವು ಅಪ್ಪಣೆ ಕೊಡುವುದಾದರೆ ನಮ್ಮ ಮಂತ್ರಿಗಳಾದ ಜಕನೂರ್ ಅವರು ಆ ಪ್ರಶ್ನೆಗೆ ಉತ್ತರ ಕೊಡುತ್ತಾರೆ.

SRI A. LAKSHMI SAGAR.—That means the Hon'ble Speaker also does not know that there is another Hon'ble Minister who is ready to answer that question.

MR. SPEAKER.—Just now the Hon'ble Minister for Revenue has informed me that Sri A. B. Jankur will answer the question on behalf of the Hon'ble Minister for Prisons and Horticulture.

SRI C. M ARUMUGHAM.—The agenda for today has been prepared by the Legislature Secretariat ; and it has been printed well in advance. The question and answers were printed well in advance. with the knowledge of the concorned Minister. When once it is prepared, it is the duty of the concerned Minister to reply. Now another Minister Sri A. B. Jaknur says that he will reply. First of all, Sri Jaknur should have written to the Hon'ble Speaker stating that he will reply on behalf of the Minister for Prisons and Horticulture. He has not done so. Now, all the Ministers are sufficiently experienced. Of course, there are some new Ministers, but they have been also seeing the functioting of the Ministers. In those days also, some Ministers used to remain absent and neglected the Houst for some days. But, I want the new Ministry to be serious aboue this matter. I want to know whether the Chair is able to exercise its powers to direct the concerned Minister ?

MR. SPEAKER.—Yes. I can direct. I am aware of it.

SRI B. B. SAYANAK.—There are only three questions for today. The question hour is most important. Even though the Ministers are young and enthusiastic, they are not attending the House. They are showing disrespect to the House. Therefore, the Hon'ble Speaker should take them to task and warn them.

MR. SPEAKER.—I request the Hon'ble Minister for Revenue to convey the sentiments expressed by the hon'ble Member Sri B. B. Sayanak to the concerned Minister so that such things are not repeated.

ಶ್ರೀ ಕೆ.ಎಚ್. ಶ್ರೀನಿವಾಸ್.—ಇಲ್ಲಿ ವಿಚಾರ ಪ್ರಸ್ತಾಪಕ್ಕೆ ಬಂದಿರುವುದರಿಂದ ನಾನು ಮಾತಾನಾಡ ಬೇಕಾಗಿದೆ. ಮಾನ್ಯ ವೆಂಕಟಪ್ಪನವರು, ಮಾನ್ಯ ಮುಖ್ಯ ಮಂತ್ರಿಯವರ ಜೊತೆ ಹೆಲಿಕ್ಯಾಪ್ಟರ್‌ನಲ್ಲಿ ಶಿವಮೊಗ್ಗಾಕ್ಕೆ ಹೋಗಿದ್ದಾರೆ. ಇವತ್ತು ಅಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಸನ್ಮಾನ ಸಮಾರಂಭ ವನ್ನು ಇಟ್ಟುಕೊಂಡಿದ್ದಾರೆ. ಈಗ ಇವರು ಹೋಗಿರುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಈಗ ಸದನ ನಡೆಯುತ್ತಿರುವುದರಿಂದ ಸದನದ ಕಾರ್ಯಕಲಾಪಗಳಿಗೆ ಪ್ರಾಮುಖ್ಯತೆ ಕೊಟ್ಟು ಇಲ್ಲಿರಬೇಕಾಗಿತ್ತು. ಶಿವಮೊಗ್ಗ ನನ್ನ ಕ್ಷೇತ್ರ. ಅಲ್ಲಿ ಇವತ್ತು ಮಾನ್ಯ ಮುಖ್ಯ ಮಂತ್ರಿಯವರನ್ನು ಸನ್ಮಾನಮಾಡಲು ಸಕಲ ವ್ಯವಸ್ಥೆಗಳನ್ನೂ ಮಾಡಿದೆ. ನ್ಯಾಯವಾಗಿ ಈ ದಿವಸ ನಾನು ಅಲ್ಲಿದ್ದು ಮುಖ್ಯ ಮಂತ್ರಿಯವರನ್ನು ಸ್ವಾಗತ ಮಾಡಬೇಕಾಗಿತ್ತು. ಆದರೆ ಇದೇ ಸಂದರ್ಭದಲ್ಲಿ ಈ ಸದನ ನಡೆಯುತ್ತಿರುವುದರಿಂದ ಮುಖ್ಯ

ಮಂತ್ರಿಯವರನ್ನು ರಿಸೀವ್ ಮಾಡಿಕೊಳ್ಳುವುದಕ್ಕೆ ಪ್ರಾಮುಖ್ಯತೆ ಕೊಡಬೇಕೋ, ಅಥವಾ ಸದನದ ಕಾರ್ಯಕಲಾಪಗಳಿಗೆ ಪ್ರಾಮುಖ್ಯತೆ ಕೊಡಬೇಕೋ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ನಮ್ಮ ಎಲ್ಲ ಕೆಲಸ ಕಾರ್ಯಗಳಿಗಿಂತಲೂ ಅತಿಮುಖ್ಯವಾದುದು ಈ ಸದನವಾದ್ದರಿಂದ, ಮೊದಲು ಇಲ್ಲಿನ ಕಾರ್ಯ ಕ್ರಮಗಳಿಗೆ ಆದ್ಯತೆ ಕೊಟ್ಟು, ಸನ್ಮಾನ ಸಮಾರಂಭವನ್ನು ಸ್ವಲ್ಪಕಾಲ ಮುಂದೂಡಬಹುದಾಗಿತ್ತು. ಆದರೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಸನ್ಮಾನ ಮಾಡುವುದರಲ್ಲಾಗಲೀ ಅಥವಾ ಸನ್ಮಾನ ಮಾಡಿಸಿ ಕೊಳ್ಳುವುದರಲ್ಲಾಗಲಿ ನನಗೆ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಎಸ್. ಬಂಗಾರಪ್ಪ (ಮಾನ್ಯ ಕಂದಾಯ ಮಂತ್ರಿಯವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಒಂದು ವಿಚಾರವನ್ನು ನಾನು ಮಾನ್ಯ ಮಾಡುತ್ತೇನೆ. ಈ ಸದನ ನಡೆಯುವ ಸಂದರ್ಭದಲ್ಲಿ ಎಲ್ಲ ಮಾನ್ಯ ಸದಸ್ಯರುಗಳೂ, ಎಲ್ಲಾ ಸಚಿವರುಗಳೂ ಸದನದಲ್ಲಿ ಹಾಜರಿರಬೇಕೆಂದು ಹಿಂದೆ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದರ ಜೊತೆಗೆ ಅನೇಕ ಸಾರಿ ಇಲ್ಲಿ ಚರ್ಚೆ ಕೂಡ ಆಗಿದೆ. ಎಷ್ಟೋ ಸಂದರ್ಭಗಳಲ್ಲಿ ಮಂತ್ರಿಗಳು ಇಲ್ಲದಿರುವ ಸಂದರ್ಭದಲ್ಲಿ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು, ಇನ್ನೂ ಮುಂತಾದವು ಇದ್ದಕ್ಕಿದ್ದಂತೆ ಬಂದುಬಿಡುವುದರಿಂದ ಮಾನ್ಯ ಸಚಿವರುಗಳು ಸದನ ನಡೆಯುವ ಸಂದರ್ಭದಲ್ಲಿ ತಮ್ಮ ಎಲ್ಲ ಕೆಲಸ ಕಾರ್ಯಗಳನ್ನೂ ಬದಿಗಿಟ್ಟು ಸದನದಲ್ಲಿ ಹಾಜರಿರಬೇಕೆಂಬ ವಾದವನ್ನು ನಾನೂ ಒಪ್ಪುತ್ತೇನೆ, ಇದರಲ್ಲಿ ನನ್ನ ಅಭ್ಯಂತರವಿಲ್ಲ. ಇನ್ನು ಮಾನ್ಯ ವೆಂಕಟಪ್ಪನವರು ತಮಗೆ ಮೊದಲೇ ಒಂದು ಪತ್ರವನ್ನು ಬರೆದು ವಿಷಯವನ್ನು ವಿವರವಾಗಿ ತಿಳಿಸಿದ್ದಾರೆ. ಆದ್ದರಿಂದ ಅದು ತಮಗೆ ಸೇರಿದ್ದು. ಇಷ್ಟು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ.

Increasing the custody period of convicts.

182. SRI H. GANGADHARAN (Krishnaraja).— Will the Minister of State for Horticulture and Prisons be pleased to state :—

(a) whether the Government has increased the custody period of convicts who are undergoing imprisonment for life;

(b) if so, when was it increased and for how many years they have to serve in the Jail;

(c) whether has it come to the notice of the Government that the new Kerala Government reduced such period to 8 years;

(d) whether the Government has got any proposal to reduce the custody period;

(e) if so, whether the proposal has met with the approval of Government and when it will be given effect?

SRI A. B. JAKNUR (Minister for Co-operation) [On behalf of Sri K. Yenkatappa (Minister of State for Horticulture and Prisons)].

(a) and (b) Due to amendment of Cr. P. C. and insertion of Section 433 (A) to Cr. P.C. in December 1978, by the Government of India, the prisoners undergoing life imprisonment have to undergo a minimum of 14 years actual imprisonment.

(c) No.

(d) No.

(e) Does not arise.